3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನು ಛಡಿಸವಾಲ್ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನು ಪುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಿಂತ್ ವಗೈರೆ ಸ್ಯಾನಿಟೆರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನು ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹಂಚಿನದಾಗಿಯಾಗಲಿ ಅಥವಾ ತಾರಕೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಯೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟುತಕ್ಕ ಮೊಹರಿ ತರಪೆ ಮತ್ತು ಜಾಗ ಸಹ ಸ್ಯಾನಿಟೆರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಬಂದು ಮತ್ತ ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪತ್ತರ ಮೇಲೆ ಡಿಪ್ಯುಟಿ ಕಮಿಷರ್ಪರವರು ಮಂಜೂರ್ಮಾಡಿದ ಹೊರ್ತು ಇತರ ಮತ್ತ ಪಣ ಯಾ ಜಾತಿಯವರು ವಾಸ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಲುಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯಾತ್ರಸುವದಕ್ಕಾಗಲಿ ಬೇಕಾಗುವ ಮಣ್ಣನ್ನು ಸ್ಯಾನಿಟೆರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋಡಿಸಲ್ಪಡುವ ಜಾಗಾವಲ್ಲಿ ತೆಗೆದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪು ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನು ಹಿಡುವೇದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲುಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪು ನಡೆದದ್ದಕ್ಕೋಸ್ಕರ ನಿವೇಶನವನ್ನು ಸರ್ಕಾರಕ್ಕೆ ಕೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹಾರ ದ್ರವ್ಯಕ್ಕಾ ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕು ದಾರ್ಯಾಗುವದಿಲ್ಲ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್.

---

## ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟ್‌ನಲ್ಲಿ.

ತಾರೀಖು 6ನೆ ಮೇ-1907.

1906—07ನೆ ಇಸವಿ ಸಿವಿಲ್ ಸೂಟ್ ನಂಬರು 6.

1906—07ನೆ ಇಸವಿ ಮಿಸಲೇನಿಯಸ್ ನಂಬರು 347.

### ವಾದೀರು.

ಮೈಸೂರು ದೇವರಾಜಮೊಹಲ್ಲಾದಲ್ಲಿರುವವರು.

1. ಉಪ್ಪಿನ ಮಂಡಿ ಸಾಹುಕಾರ ಇಬ್ರಾಹಿಂಸೇಟು
2. ಡಿಟೋ ವ್ಯಾಪಾರದ ಅಬ್ದುಲ್‌ಗನಿ ಸೇಟು
3. ಜಿನಸಿ ವ್ಯಾಪಾರದ ಸಾಹುಕಾರ್ ಅಬ್ದುಲ್ ರಹಿಮ್ಮತ್‌ಸೇಟು
4. ಮುನಿಸಿಪಲ್ ಕಮಿಷನರ್ ಸಾಹುಕಾರ್ ರಹಿಮತ್ತುಲ್ಲಾ ಸೇಟು
5. ಪಾತ್ರ ಅಂಗಡಿ ಕಂಟ್ರಾಕ್ಟರ್ ದಾವೂದ್‌ಖಾ ಸಾಹೇಬರು
6. ದಳ್ಳಾಳಿ ಮಗ ಮಹಮದ್‌ಸಾಬಿ
7. ಜಿನಸಿ ಪೈರುದಾರ್ರು ಮಹಮ್ಮದಖಾಶೀಂಸಾಬ್
8. ಖಾಶಿಂಸಾಬರ ಮಗ ಕಂಟ್ರಾಕ್ಟರ್ ಮಹಮ್ಮದ್ ಸಾಹೇಬ್

### ಪ್ರತಿವಾದಿ,

ಸದರಿ ದೇವರಾಜ ಮೊಹಲ್ಲಾ ಸಂತೇಪೇಟೆಯಲ್ಲಿರುವ ಅಬ್ದುಲ್ ರಜಾಕ್ ಅಲ್ಲೀಖಾನ್‌ಮೆಕ್ಕಿಯವರ ಮಗ ಮಹಮ್ಮದಲ್ಲೀಖಾನ್ ಮೇಕ್ಕಿ.

ಮೈಸೂರಲ್ಲಿರುವ ಎಲ್ಲಾ ಮಹಮ್ಮದೀಯ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಶ್ರೀರಾಂಪೇಟೆಯಲ್ಲಿರುವ ಮಹಮ್ಮದೀಯರ ಮಸೀತಿಗೆ ತಾನು ಮುತ್ತವಲ್ಲಿಯೆಂದು ಹೇಳಿಕೊಂಡು ಹಾಲಿ ಮುತ್ತವಲ್ಲಿ ಕೆಲಸ ನೋಡುತ್ತಾ ಇರುವ ಪ್ರತಿವಾದಿ ಮಹಮ್ಮದಲ್ಲಿಖಾನ್ ಮೇಕ್ಕಿಯವರು ಮುತ್ತವಲ್ಲಿ ಕೆಲಸಕ್ಕೆ ಅರ್ಹರಲ್ಲವೆಂದೂನ್ನೂ, ಈತ ಮುಂದೆ ಮುತ್ತವಲ್ಲಿ ಕೆಲಸ ನೋಡಕೂಡವೆಂದೂನ್ನೂ, ಡಿಕ್ಲೇರ್ ಮಾಡಿ ಕಂಟ್ರಾಕ್ಟರ್ ಮಹಮ್ಮದ್ ಇಬ್ರಾಹಿಂ ಸಾಹೇಬರನ್ನಾಗಲಿ, ಅಥವಾ ಲಾಯಖ್ಖಾದ ಬ್ಯಾರೆ ಹನ್ಯಾರಾದರು ಒಬ್ಬರನ್ನು, ಮುತ್ತವಲ್ಲಿ ಕೆಲಸಕ್ಕೆ ನೇಮಕ ಮಾಡಿ ಸದರಿ ಮಸೀತಿ ಕೆಲಸಗಳು ಮುಂದೆ ನಡಿಯುವದಕ್ಕೆ ಬಂದು ಕ್ರಮವಾದ ಏರ್ಪಾಡನ್ನ ಕೋರ್ಟಿನವರು ಮಾಡಿಕೊಡಬೇಕೆಂಬದಾಗಿ ವಗೈರೆ ಮೇಲೆಕಂಡ ವಾದೀರು ತಮಗೋಸ್ಕರವಾಗಿಯೂ ಇತರ ಮಹಮ್ಮದೀಯ ಜನಗಳಿಗೋಸ್ಕರವಾಗಿಯು ಎಂದು ಸಿವಿಲ್ ಪ್ರೊಸೀಜ್ಯೂರ್‌ಕೋಡು 30ನೆ ಸೆಕ್ಷನ್ ಪ್ರಕಾರ ಅಪ್ಪಣೆ ಪಡದು ದಾಖಲ ಮಾಡಿದ ದಾವಾ 1907ನೆ ಇಸವಿ ಜೂನ್ ಮಾಹೆ 1ನೆ ತಾರೀಖಿಗೆ ಹಿಯರಂಗು ಇರುತ್ತೆ.

ಸದರಿ ಮಸೀತಿಗೆ ಅಭಿಮಾನಶಾಲಿಗಳಾದ ಮಹಮ್ಮದೀಯರಸಮೂಹಕ್ಕಾಗಿ ಮೇಲ್ಕಂಡ ವಾದೀರು ಮುಂದಿನ ಕ್ರಮ ನಡಿಸುವ ಭಾಗದಲ್ಲಿ ಅಭ್ಯಂತರವೇನಾದರೂ ಇದ್ದಲ್ಲಿ ಆಂಥಾವರು ಮೇಲೆ ಕಂಡ ಹೀರಂಗು ತಾರೀಖಿನ ದಿವಿ 11 ಘಂಟೆಗೆ ಖುದ್ದಾಗಿ ಆಗಲಿ, ಅಥವಾ ಅಧಿಕಾರ ಹೊಂದಿದ ವಕೀಲರ ಮೂಲಕವಾಗಿ ಆಗಲಿ ಈ ಕೋರ್ಟಿನ ರೂಬರೂಬು ಹಾಜರಾಗಿ ಲಿಖಿತ ಮೂಲಕ ಕೋರ್ಟಿಗೆ ತಿಳಿಯಪಡಿಸಿಕೊಳ್ಳತಕ್ಕದ್ದಿದೆ.

ಎಸ್. ವೆಂಕಟವರದಪ್ಪಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.